# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006

ದಿನಾಂಕ 22.08.2019ರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಛೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಮತ್ತು<br>ಡೀನ್ (ಶೈಕ್ಷಣಿಕ) (ಕಾ.ಭಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಪ್ರೊ. ಜಗದೀಶ**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

30/8/19
ಕುಲಸಚಿವರು

ಕುಲಪತಿಗಳು
30/08/19

ವಿಷಯ ಸಂಖ್ಯೆ : 13.01

ವಿಷಯ: ಆಂತರಿಕ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳ ಪರೀಕ್ಷಾ ದಾಖಲಾತಿ ಪರಿಶೀಲನೆ ಬಗ್ಗೆ.

******

ವಿಶ್ವವಿದ್ಯಾನಿಲಯದ ಆಂತರಿಕ ವಿವಿಧ ಶಿಕ್ಷಣಕ್ರಮಗಳನ್ನು ವ್ಯಾಸಂಗ ಮಾಡಿದ್ದ ವಿದ್ಯಾರ್ಥಿಗಳು ತಿದ್ದುಪಡಿ ಅಂಕಪಟ್ಟಿ ವಿವಿಧ ಪ್ರಮಾಣ ಪತ್ರಗಳ ಕೋರಿಕೆ ಸಂಬಂಧ ಅರ್ಜಿ ಸಲ್ಲಿಸಿದ್ದು, ದಾಖಲಾತಿ ಪರಿಶೀಲನೆಯಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸುವ ದೃಷ್ಟಿಯಿಂದ ಈ ಮುಂದಿನ ಶೈಕ್ಷಣಿಕ ಸಾಲುಗಳವಾರು ದಾಖಲಾತಿ ಪರಿಶೀಲನೆ ಮಾಡುವ ಕ್ರಮಗಳ ಬಗ್ಗೆ.

01. 1996 ರಿಂದ 2009 ರವರೆಗಿನ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯದ ರಹಸ್ಯ ಧಾಖಲೆಗಳನ್ನು ವಿವಿಯ ನೌಕರರೆ ನಿರ್ವಹಿಸಿ ತಃಖ್ತಿಕರಣ (Tabulation Ledgers)ಗಳನ್ನು ದೃಢೀಕರಿಸಿರುವಂತವುಗಳ ಅರ್ಜಿಗಳನ್ನು ಯಾವುದೇ ಎ–ಫಾರಂ, ಒಎಂಆರ್ ಪರಿಶೀಲನೆ ಮಾಡದೆ ವಿತರಣೆಯಾಗಿರುವ ಅಂಕಪಟ್ಟಿ ಮತ್ತು ತಃಖ್ತಿಕರಣ ವಹಿ ತಾಳೆಯಾದಲ್ಲಿ ಅಂತಹ ವಿದ್ಯಾರ್ಥಿಗಳ ಮನವಿ / ಅರ್ಜಿಯನ್ನು ವಿಳಂಬ ಮಾಡದೆ ವಿಲೇವಾರಿ ಮಾಡಲು ಕ್ರಮವಹಿಸುವ ಬಗ್ಗೆ.

02. 2010–11 ಮತ್ತು 2011–12ರ ವರೆಗೆ ಮೆ. ಮೆಟಾ ಐ ಟೆಕ್ನಾಲಜಿ, ಯವರು ನಿರ್ವಹಿಸಿದ್ದ ವಿವಿಧ ಆಂತರಿಕ ಶಿಕ್ಷಣಕ್ರಮಗಳ ಪರೀಕ್ಷಾ ರಹಸ್ಯ ಕಾರ್ಯದ ದಾಖಲೆಗಳಲ್ಲಿ ಅಂಕಗಳ ದಾಖಲೆ ಮಾಡಿರುವ ವಹಿಗಳನ್ನು (Ledger) ದೃಢೀಕರಿಸದೆ ಇರುವುದರಿಂದ ಸದರಿ ಸಾಲಿನ ವಿವಿಧ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿಗೆ ಮನವಿ ಸಲ್ಲಿಸಿದ್ದ ಸಂದರ್ಭ ಅಂಕಗಳ ಲೆಡ್ಜರ್, ಎ–ಫಾರಂ ಪ್ರವೇಶಾತಿ ಅನುಮೋದನಾ ಪಟ್ಟಿಗಳನ್ನು ಪರಿಶೀಲಿಸುವ ಅವಶ್ಯಕತೆಯಿರುತ್ತದೆ.

    ಸದರಿ ಸಾಲುಗಳ ವಿದ್ಯಾರ್ಥಿಗಳಿಗೆ ಈಗಾಗಲೇ ನಿಯಮಾನುಸಾರ ಪದವಿ ಪ್ರಮಾಣ ಪತ್ರ ವಿತರಿಸಲಾಗಿದ್ದರೆ ಪ್ರವೇಶಾತಿ ಅನುಮೋದನಾ ಪಟ್ಟಿಯನ್ನು ಹೊರತುಪಡಿಸಿ ಪರೀಕ್ಷಾ ಅಂಕಗಳ ಲೆಡ್ಜರ್, ಎ–ಫಾರಂಗಳೊಂದಿಗೆ ಅಂಕಪಟ್ಟಿಗಳನ್ನು ಪರಿಶೀಲಿಸಿ ನೈಜತೆ ಪತ್ರ ಮತ್ತು ಪ್ರತಿಲಿಪಿಗಳನ್ನು ವಿಳಂಬ ಮಾಡದೆ ವಿಲೇವಾರಿ ಮಾಡಲು ಕ್ರಮವಹಿಸುವುದು.

**03.** 2012–13ರ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು ತದನಂತರದ ಸಾಲುಗಳಲ್ಲಿ ಪರೀಕ್ಷೆ ನಡೆದು ಪರೀಕ್ಷಾ ರಹಸ್ಯಕಾರ್ಯ ನಿರ್ವಹಿಸಿದ ಮೆ. ಐಇಎಂ ಸಂಸ್ಥೆ, ಮುಂಬೈ, ಪರೀಕ್ಷಾ ಚಟುವಟಿಕೆಯ ದಾಖಲೆಗಳನ್ನು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯಕ್ಕೆ ನೀಡದೆ ಇರುವುದರಿಂದ ದಾಖಲೆಗಳು ಅಪರಿಪೂರ್ಣವಾಗಿರುವ ಹಿನ್ನೆಲೆಯಲ್ಲಿ ಆಂತರಿಕ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳು ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರಗಳ ಕೋರಿಕೊಂಡ ಸಂದರ್ಭ, ಪ್ರವೇಶಾತಿ ದೃಢೀಕರಣ ಮಾಡಿಕೊಂಡು, ಪರೀಕ್ಷಾ ಅಂಕಗಳ ಲೆಡ್ಜರ್ ಮತ್ತು ಒ.ಎಂ.ಆರ್‌ಗಳನ್ನು ಅಂಕಪಟ್ಟಿಯೊಂದಿಗೆ ತಾಳೆ ಮಾಡಿ ದೃಢೀಕರಿಸಿಕೊಂಡು ವಿದ್ಯಾರ್ಥಿಗಳ ಅರ್ಜಿಗಳನ್ನು ವಿಲೇವಾರಿ ಮಾಡುವುದರ ಬಗ್ಗೆ.

04. **2009** ರಿಂದ **2015**ರವರೆಗಿನ ಪರೀಕ್ಷಾ ಒಎಂಆರ್‌ಗಳ ಪರಿಶೀಲನೆಯನ್ನು ಭೌತಿಕವಾಗಿ **(Manual)** ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳ ಅರ್ಜಿ ವಿಲೇವಾರಿ ವಿಳಂಬವಾಗುತ್ತಿದ್ದು ಇದನ್ನು ತಡೆಗಟ್ಟಲು ಸದರಿ ಸಾಲುಗಳ ಒಎಂಆರ್‌ಗಳನ್ನು ಸ್ಕ್ಯಾನಿಂಗ್ ಮಾಡಿ ಸಾಫ್ಟ್‌ಕಾಪಿ ಸಿದ್ದಪಡಿಸಿಕೊಂಡಲ್ಲಿ ಮಾತ್ರ ಪರಿಶೀಲನೆಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ಪಡುತ್ತಾ, ನಿಯಮನುಸಾರ ಕ್ರಮವಹಿಸಿ ಅರ್ಹ ಸಂಸ್ಥೆಯಿಂದ ಒಎಂಆರ್‌ಗಳನ್ನು ಸ್ಕ್ಯಾನ್ ಮಾಡಿ ಸಾಫ್ಟ್ ಕಾಪಿ ಮಾಡಿಸಲು ಕ್ರಮವಹಿಸಬಹುದರ ಬಗ್ಗೆ

ಈ ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಸದರಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ, ನಿರ್ಣಯಕ್ಕಾಗಿ ಮತ್ತು ಅನುಮೋದನೆಗೆ ಮಂಡಿಸಿದೆ.

30/8/19
ಕುಲಸಚಿವರು

ಕುಲಪತಿಗಳು
30/8/19

ತೀರ್ಮಾನ : ಮೇಲ್ಕಂಡ ವಿಷಯ ಸಂಖ್ಯೆ: 13.01ರ ನಿರ್ಣಯಗಳು

1) ಅಂಕಪಟ್ಟಿ ಮತ್ತು ತಃಖ್ತಿಕರಣ ವಹಿ ತಾಳೆಯಾದಲ್ಲಿ ಅಂತಹ ವಿದ್ಯಾರ್ಥಿಗಳ ಮನವಿ / ಅರ್ಜಿಯನ್ನು ಪರಿಗಣಿಸಲು ಶಿಫಾರಸ್ಸು ಮಾಡಲಾಯಿತು.
2) 2010–11 ಮತ್ತು 2011–12ರ ಆಂತರಿಕ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿಗೆ ಮನವಿ ಸಲ್ಲಿಸಿದ್ದ ಸಂದರ್ಭದಲ್ಲಿ ಅಂಕಗಳ ಲೆಡ್ಜರ್, ಎ–ಫಾರಂ ಪ್ರವೇಶಾತಿ ಅನುಮೋದನಾ ಪಟ್ಟಿಗಳನ್ನು ಪರಿಶೀಲಿಸಿ ಪರಿಗಣಿಸಲು ಶಿಫಾರಸ್ಸು ಮಾಡಲಾಯಿತು.
3) 2012–13ರ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷಾ ರಹಸ್ಯಕಾರ್ಯದ ದಾಖಲೆಗಳು ಅಪರಿಪೂರ್ಣವಾಗಿರುವ ಹಿನ್ನೆಲೆಯಲ್ಲಿ ಆಂತರಿಕ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳು ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರಗಳ ಕೋರಿಕೊಂಡ ಸಂದರ್ಭದಲ್ಲಿ, ಪ್ರವೇಶಾತಿ ದೃಢೀಕರಣ ಮಾಡಿಕೊಂಡು, ಪರೀಕ್ಷಾ ಅಂಕಗಳ ಲೆಡ್ಜರ್ ಮತ್ತು ಒ.ಎಂ.ಆರ್‌ಗಳನ್ನು ಅಂಕಪಟ್ಟಿಯೊಂದಿಗೆ ತಾಳೆ ಮಾಡಿ ದೃಢೀಕರಿಸಿಕೊಂಡು ವಿದ್ಯಾರ್ಥಿಗಳ ಅರ್ಜಿಗಳನ್ನು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಲಾಯಿತು.
4) ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಅರ್ಹ ನೋಂದಾಯಿತ ಸಂಸ್ಥೆಯವರಿಂದ ಒ.ಎಂ.ಆರ್ ಗಳನ್ನು ಸ್ಕ್ಯಾನ್ ಮಾಡಿಸಿ ಮುಂದಿನ ಕ್ರಮವಹಿಸಲು ಶಿಫಾರಸ್ಸು ಮಾಡಲಾಯಿತು.

-----

ವಿಷಯ ಸಂಖ್ಯೆ : 13.02

ವಿಷಯ: ಕರಾಮುವಿ ನಿಲಯದ 2013–14 ಮತ್ತು 2014–15ನೇ ಸಾಲಿನ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮುದ್ರಿಸಲು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸದಿರುವ ಐ.ಇ.ಎಂ. ಸಂಸ್ಥೆ ಮೇಲೆ ಯಾವ ಕ್ರಮಕೈಗೊಳ್ಳುವುದು ಎಂಬುದರ ಬಗ್ಗೆ.

*****

2011–12 ಮತ್ತು 2012–13ರ ಶೈಕ್ಷಣಿಕ ಸಾಲಿನಲ್ಲಿ ಮಾನ್ಯತೆ ಹೊಂದಿದ್ದ ಅವಧಿಯ ವಿದ್ಯಾರ್ಥಿಗಳು 2015–16 ಮತ್ತು 2016–17ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಮತ್ತು ಮರು ಮೌಲ್ಯಮಾಪನ ಫಲಿತಾಂಶವನ್ನು ಈ ಹಿಂದೆ ಪರೀಕ್ಷಾ ಕಾರ್ಯನಿರ್ವಹಿಸುತ್ತಿದ್ದ ಐ.ಇ.ಎಂ. ಸಂಸ್ಥೆಯವರು ನೀಡಿರುವುದಿಲ್ಲ.

ಅಲ್ಲದೆ, ಸಹಭಾಗಿತ್ವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಗೆಯ ಡೇಟಾವನ್ನು ಮೆ. ಐಇಎಂ ಸಂಸ್ಥೆಯವರು ನೀಡಿರುವುದಿಲ್ಲ. ಕರಾರು ಪತ್ರದ ಪ್ರಕಾರ ಆಯಾಯ ಪರೀಕ್ಷೆಗಳ ಡೇಟಾಗಳನ್ನು ಆಯಾಯ ಪರೀಕ್ಷೆಗಳ ಹುಂಡಿ ಪಾವತಿಸುವ ಸಂದರ್ಭದಲ್ಲಿಯೇ ನೀಡಬೇಕಾಗಿತ್ತು. ಆದರೆ, ಈ ನಿಯಮ ಇಲ್ಲಿ ಪಾಲನೆಯಾಗಿರುವುದಿಲ್ಲ. ಆದರಿಂದ. ಈ ಬಗ್ಗೆ ಯಾವ ಕ್ರಮ ಅನುಸರಿಸಬೇಕು.

2013–14 ಮತ್ತು 2014–15ರಲ್ಲಿ ಇನ್‌ಹೌಸ್ ಶಿಕ್ಷಣಕ್ರಮಗಳ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಅಂಕಪಟ್ಟಿಯನ್ನು ವಿತರಿಸಲಾಗಿರುತ್ತದೆ. 2015–16ರ ಸಾಲಿನಲ್ಲಿ ನಡೆಸಲಾದ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ. ಆದರೆ, ಅಂಕಪಟ್ಟಿಯನ್ನು ಐ.ಇ.ಎಂ. ಸಂಸ್ಥೆಯವರು ಅಂಕಪಟ್ಟಿಗಳನ್ನು ಮುದ್ರಿಸಿ ನೀಡಿರುವುದಿಲ್ಲ.

30/8/19
ಕುಲಸಚಿವರು

ಕುಲಪತಿಗಳು
30/8/19

ದಿನಾಂಕ: 16.06.2015ರ ಯು.ಜಿ.ಸಿ. ಸಾರ್ವಜನಿಕ ಪ್ರಕಟಣೆಯಲ್ಲಿ 2013–14 ರಿಂದ ಜಾರಿಗೆ ಬಂದಂತೆ ಕರಾಮುವಿ ನಿಲಯದ ಮಾನ್ಯತೆಯನ್ನು ರದ್ದುಪಡಿಸಿದ್ದ ಹಿನ್ನೆಲೆಯಲ್ಲಿ ಹಾಗೂ ಈ ಮಧ್ಯೆ ವಿಶ್ವವಿದ್ಯಾನಿಲಯದ ಅಂಕಪಟ್ಟಿಗಳ ಬಗೆಗೆ ಸಿ.ಐ.ಡಿ. ತನಿಖೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅಂಕಪಟ್ಟಿ ಮುದ್ರಣ ಕಾರ್ಯ ಸ್ಥಗಿತಗೊಂಡಿತ್ತು.

ಆ ನಂತರದಲ್ಲಿ ಐ.ಇ.ಎಂ. ಸಂಸ್ಥೆಯವರು ಕಾರ್ಯನಿರ್ವಹಿಸುತ್ತಿದ್ದ ಕೊಠಡಿಗಳನ್ನು ಸೀಜ್ ಮಾಡಲಾಗಿತ್ತು. ಆದರೆ 2016–17 ರಲ್ಲಿ ಐ.ಇ.ಎಂ. ಸಂಸ್ಥೆಯವರಿಗೆ ಹುಂಡಿ ಪಾವತಿಸುವ ಸಂದರ್ಭದಲ್ಲಿ ಸದರಿ ಸಂಸ್ಥೆಯವರಿಗೆ ಪರೀಕ್ಷಾ ಕಾರ್ಯನಿರ್ವಹಿಸುತ್ತಿದ್ದ ಕೊಠಡಿಗಳ ಬೀಗದ ಕೀಗಳನ್ನು ನೀಡಲಾಗಿತ್ತು. ಆದರೆ, 2016–17ರ ಸಾಲಿನ ಪರೀಕ್ಷಾ ದತ್ತಾಂಶವನ್ನು ನೀಡಿರುವುದಿಲ್ಲ. ಈ ಸಂಬಂಧ ಸದರಿ ಸಾಲಿನ ದತ್ತಾಂಶವನ್ನು ಒದಗಿಸುವಂತೆ ಸಾಕಷ್ಟು ಬಾರಿ ಪತ್ರ ಮುಖೇನ ಹಾಗೂ ದೂರವಾಣಿ ಮೂಲಕ ತಿಳಿಸಲಾಗಿದ್ದರು ದತ್ತಾಂಶವನ್ನು ನೀಡಿರುವುದಿಲ್ಲ.

2013–14 ಮತ್ತು 2014–15ನೇ ಸಾಲಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳ ಫಲಿತಾಂಶವು ಪ್ರಕಟವಾಗಿರುತ್ತದೆ. ಆದರೆ ಈ ಸಾಲಿನ ವಿದ್ಯಾರ್ಥಿಗಳ ಅಂಕಪಟ್ಟಿಯು ಮುದ್ರಣವಾಗಿರುವುದಿಲ್ಲ. ಈ ಸಾಲಿನ ವಿದ್ಯಾರ್ಥಿಗಳು ಸರ್ಕಾರದ ವಿವಿಧ ನೇಮಕಾತಿಗೆ ಅರ್ಜಿ ಸಲ್ಲಿಸಿ ಆಯ್ಕೆಗೊಂಡಿದ್ದು ತಮ್ಮ ಅಂಕಪಟ್ಟಿಗಳನ್ನು ವಿತರಿಸುವಂತೆ ಒತ್ತಾಯಿಸುತ್ತಿರುತ್ತಾರೆ.

ಐ.ಇ.ಎಂ. ಸಂಸ್ಥೆಯವರು ಪರೀಕ್ಷಾ ದತ್ತಾಂಶವನ್ನು ಈವರೆವಿಗೂ ನೀಡದೆ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಮಾರಕವಾಗುವಂತೆ ವರ್ತಿಸುತ್ತಿರುವ ಐ.ಇ.ಎಂ. ಸಂಸ್ಥೆಯವರ ವಿರುದ್ಧ ಯಾವ ರೀತಿಯ ಕ್ರಮವಹಿಸಬೇಕೆಂಬುದರ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

ತೀರ್ಮಾನ : **2013–14 ಮತ್ತು 2014–15ರಲ್ಲಿ ನಡೆದ ವಿವಿಧ ಕೋರ್ಸ್‌ಗಳ ಪರೀಕ್ಷೆಯ ದತ್ತಾಂಶಗಳ ಬಗ್ಗೆ ಐ.ಇ.ಎಂ. ಸಂಸ್ಥೆ ಮುಖ್ಯಸ್ಥರ ಜೊತೆ ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು. ಪರೀಕ್ಷಾಂಗ ವಿಭಾಗದಲ್ಲಿ ಸದರಿ ದತ್ತಾಂಶಗಳು ಲಭ್ಯವಿದ್ದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಅಲ್ಲಿಯವರೆಗೆ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳ ಕೋರಿಗೆ ಮೇರೆಗೆ ನೀಡಲು 52ನೇ ಶೈಕ್ಷಣಿಕ ಮಂಡಳಿ ಸಭೆಯ ವಿಷಯ ಸಂಖ್ಯೆ: 52.01ರಲ್ಲಿ ನಿರ್ಣಯಿಸಲಾಗಿರುತ್ತದೆ.**

**ವ್ಯವಸ್ಥಾಪನಾ ಮಂಡಳಿಯ 157.10ರ ವಿಷಯಕ್ಕೆ ಸಂಬಂಧಪಟ್ಟಂತೆ 52ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯ ವಿಷಯಗಳನ್ನು ವ್ಯವಸ್ಥಾಪನಾ ಮಂಡಳಿಯು ಯಥಾವತ್ತಾಗಿ ಅನುಮೋದಿಸಿದ್ದು.**

**ಸದರಿ ತೀರ್ಮಾನಗಳ ರೀತ್ಯಾ ಮುಂದಿನ ಕ್ರಮವಹಿಸುವುದು ಹಾಗೂ ಐ.ಇ.ಎಂ. ಸಂಸ್ಥೆಯವರಿಗೆ ಬಾಕಿ ಇರುವ ಹುಂಡಿಯನ್ನು ಪಾವತಿ ಮಾಡಬಾರದಾಗಿ ಸಭೆಯಲ್ಲಿ ನಿರ್ಣಯಿಸಲಾಯಿತು.**

-----

ವಿಷಯ ಸಂಖ್ಯೆ : 13.03

ವಿಷಯ: ವಿಶ್ವವಿದ್ಯಾನಿಲಯದ ಇನ್‌ಹೌಸ್ ಶಿಕ್ಷಣಕ್ರಮಕ್ಕೆ 2013–14 ಹಾಗೂ 2014–15ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪಡೆದಿರುವ ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಅನುಮೋದನೆಗಾಗಿ.

*****

3/9/19

ಕುಲಸಚಿವರು

ಕುಲಪತಿಗಳು
30/8/19

ವಿಶ್ವವಿದ್ಯಾನಿಲಯದ ಇನ್‌ಹೌಸ್ ಶಿಕ್ಷಣಕ್ರಮಗಳ 2013–14 ಮತ್ತು 2014–15ನೇ ಸಾಲಿನ ವಿದ್ಯಾರ್ಥಿಗಳು ಸಲ್ಲಿಸಿರುವ W.P No 14903–917 of 2019 ಮತ್ತು W.P No 15628/2019 ಪ್ರಕರಣಗಳನ್ನು ದಾಖಲಿಸಿ ಮಾನ್ಯ ಉಚ್ಚ ನ್ಯಾಯಲಯದ ದಿನಾಂಕ: 11.09.2019ರ ಆದೇಶ ತಂದಿರುವ ವಿದ್ಯಾರ್ಥಿಗಳಿಗೆ ವಿವಿಯಿಂದ ಅಂಕಪಟ್ಟಿಗಳು, ಪಿಪಿಸಿ, ನೈಜತೆ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ.

ನ್ಯಾಯಲಯದಲ್ಲಿ ದಾವೆಯನ್ನು ಸಲ್ಲಿಸದೆ ಇರುವ 2013–14 ಮತ್ತು 2014–15ನೇ ಸಾಲಿನ ವಿದ್ಯಾರ್ಥಿಗಳು ತಮಗೂ ಉಚ್ಚನ್ಯಾಯಲಯದ ಆದೇಶ ಅನ್ವಯಿಸಿ ಅಂಕಪಟ್ಟಿ ಮತ್ತು ಪಿಪಿಸಿ ಮತ್ತು ನೈಜತೆ ಪ್ರಮಾಣ ಪತ್ರಗಳನ್ನು ವಿತರಿಸಿ ಎಂದು ಕೋರುತ್ತಿದ್ದಾರೆ.

ಸರ್ಕಾರದ ಆದೇಶದ ಸಂಖ್ಯೆ ಇಡಿ 54 ಯುಓವಿ 2017 (ಭಾಗ–01) ದಿನಾಂಕ: 05.03.2018ರ ಆದೇಶದಲ್ಲಿ ಸದರಿ 2013–14 ಮತ್ತು 2014–15ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕ ಮತ್ತು ಸ್ನಾತಕೋತ್ತರ ಉತ್ತೀರ್ಣರಾಗಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರವನ್ನು ಪಡೆಯದೆಯಿರುವ ತಾಂತ್ರಿಕೇತರ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲು ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ 2013–14 ಮತ್ತು 2014–15ರ ಇನ್‌ಹೌಸ್‌ನ ಎಲ್ಲಾ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳಿಗೆ ಏಕರೂಪ ಸಾಮಾಜಿಕ ನ್ಯಾಯದಡಿಯಲ್ಲಿ ಪರೀಕ್ಷಾ ದಾಖಲೆಗಳನ್ನು ನೀಡುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

ತೀರ್ಮಾನ : **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರ್ನಾಟಕ ರಾಜ್ಯದಲ್ಲಿ ಇನ್–ಹೌಸ್ ಕೋರ್ಸ್‌ಗಳ 2013–14 ಮತ್ತು 2014–15ರಲ್ಲಿ ಪ್ರವೇಶಾತಿ ಪಡೆದು ತೇರ್ಗಡೆ ಹೊಂದಿದ ಕೆಲವು ವಿದ್ಯಾರ್ಥಿಗಳು ಸಲ್ಲಿಸಿರುವ W.P.No. 14903-917 of 2019 ಮತ್ತು W.P.No.15628/2019 ಪ್ರಕರಣದಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 11.07.2019ರ ಆದೇಶವನ್ನು ಅನುಷ್ಠಾನಗೊಳಿಸಲು 11ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ವಿಷಯ ಸಂಖ್ಯೆ: 11.01ರಲ್ಲಿ ನಿರ್ಣಯಿಸಲಾಗಿರುತ್ತದೆ.**

**ಇಂತಹ ಇತರೆ ವಿದ್ಯಾರ್ಥಿಗಳ ಮನವಿಗಳನ್ನು ಪರಿಗಣಿಸುವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ಆಗಿಂದಾಗ್ಗೆ ನೀಡುವ ಆದೇಶಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲು ನಿರ್ಣಯಿಸಲಾಯಿತು.**

**11ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು 157ರ ವ್ಯವಸ್ಥಾಪನಾ ಮಂಡಳಿ ಸಭೆಯ ವಿಷಯ ಸಂಖ್ಯೆ: 157.11ರಲ್ಲಿ ರಲ್ಲಿ ಮಂಡಿಸಿ 11ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಯಥಾವತ್ತಾಗಿ ಅನುಮೋದಿಸಲಾಗಿದೆ.**

**ಈ ತೀರ್ಮಾನಗಳ ರೀತ್ಯಾ ಮುಂದಿನ ಕ್ರಮವಹಿಸುವುದೆಂದು ನಿರ್ಣಯಿಸಲಾಯಿತು.**

-----

ವಿಷಯ ಸಂಖ್ಯೆ : 13.04

ವಿಷಯ: ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳ ನಕಲಿಯಾಗುವ ಹಾವಳಿ ತಪ್ಪಿಸಲು ಪಾರದರ್ಶಕತೆಯಿಂದ ಆಧಾರ ಸಂಖ್ಯೆ ಆಧಾರಿತ ಡಿಜಿಟಲ್ (E-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ವಿತರಿಸುವ ಸರ್ಕಾರದ ಯೋಜನೆಯ ಅನುಷ್ಠಾನದ ಸಂಬಂಧ ಕ್ರಮಕೈಗೊಳ್ಳುವ ಬಗ್ಗೆ.

*****

28/8/19
ಕುಲಸಚಿವರು

ಕುಲಪತಿಗಳು
30/8/19

ಕರ್ನಾಟಕ ರಾಜ್ಯ ಸರ್ಕಾರ ಆದೇಶ ಸಂಖ್ಯೆ ಇಡಿ 16 ಇಜಿಓವಿ 2018 ಬೆಂಗಳೂರು ದಿನಾಂಕ: 31.05.2019ರಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅಧೀನ ವಿಶ್ವವಿದ್ಯಾನಿಲಯಗಳು ಆಧಾರದ ಸಂಖ್ಯೆ ಆಧಾರಿತ (E-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಮೆ. ಕಿಯೋನಿಕ್ಸ್ ಸಂಸ್ಥೆಯವರು ಇಡಿಜಿಎಸ್ ತಂತ್ರಾಂಶವನ್ನು ಬಳಸಿಕೊಂಡು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಆನ್‌ಲೈನ್ / ಡಿಜಿಟಲ್ ಫಾರ್ಮ್ಯಾಟ್ ತಯಾರಿಸಿ ವಿತರಿಸಲು ಹಾಗೂ ಪ್ರತಿಯನ್ನು National Academic Depository ಮಾದರಿಯಲ್ಲಿ Karnataka State Data Centre (KSDC)ಯಲ್ಲಿ ಶೇಖರಿಸಿ ಯೋಜನೆ ಅನುಷ್ಠಾನಗೊಳಿಸಲು ಆದೇಶವಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿಯೂ ಸರ್ಕಾರದ ಸದರಿ ಯೋಜನೆ ಅನುಷ್ಠಾನಗೊಳಿಸಲು ನಿರ್ಧಾರಿಸಬೇಕಾಗಿದೆ. (E-Sign) ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳ ಒಂದೊಂದು ಪ್ರತಿಗೆ ಕಿಯೋನಿಕ್ಸ್ ಸಂಸ್ಥೆಯವರಿಗೆ ರೂ 156/-ಗಳನ್ನು ವಿಶ್ವವಿದ್ಯಾನಿಲಯ ಪಾವತಿಸಬೇಕಾಗಿರುತ್ತದೆ. ಒಬ್ಬ ವಿದ್ಯಾರ್ಥಿಗೆ ಎಷ್ಟೇ ಅಂಕಪಟ್ಟಿಗಳನ್ನು ನೀಡಿದರು ಅಷ್ಟ ಸಂಖ್ಯೆ ಪ್ರತಿಯೊಂದಕ್ಕೂ ತಲಾ ರೂ.156/-ಗಳನ್ನು ಪಾವತಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯವು ಸ್ವಯಂ ಆರ್ಥಿಕ ಸ್ವಾವಲಂಬನೆಯ ಸಂಸ್ಥೆಯಾಗಿದ್ದು, ಸರ್ಕಾರದ ವತಿಯಿಂದ ಯಾವುದೆ ಅನುದಾನ ಲಭ್ಯವಾಗುತ್ತಿಲ್ಲ. ಪ್ರಸ್ತುತ, ಚಾಲ್ತಿಯಲ್ಲಿರುವ  ಪರೀಕ್ಷಾ ಶುಲ್ಕದಲ್ಲಿ (E-Sign) ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಮುಂದಾದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುತ್ತದೆ. ಈ ಬಗೆಗೂ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗುತ್ತದೆ.

ಈ ಹಿಂದೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಅಂಕಪಟ್ಟಿಗಳು 18,00,000 ಪ್ರತಿಗಳು ಮುದ್ರಣವಾಗಿ, ಪ್ರಸ್ತುತ ದಾಸ್ತಾನಿನಲ್ಲಿ 8,54,358 ಸಂಖ್ಯೆಯಲ್ಲಿ ಇರುತ್ತವೆ. ಹಾಗೆಯೇ ಎಲ್ಲಾ ಪದವಿ ಪ್ರಮಾಣ ಪತ್ರಗಳು 2,00,000 ಪ್ರತಿಗಳು ಮುದ್ರಣವಾಗಿ, ಪ್ರಸ್ತುತ ದಾಸ್ತಾನಿನಲ್ಲಿ 1,73,768 ಸಂಖ್ಯೆಯಲ್ಲಿ ಇರುತ್ತವೆ.

ಸರ್ಕಾರದ ಆದೇಶದನ್ವಯ (E-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ವಿತರಿಸಲು ಕ್ರಮಕೈಗೊಂಡಾಗ ಸದರಿ ದಾಸ್ತಾನಿನಲ್ಲಿರುವ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಯಾವ ರೀತಿ ಬಳಕೆ ಮಾಡಬೇಕೆಂಬ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

**ತೀರ್ಮಾನ : 2019ರ ಸಾಲಿನಲ್ಲಿ ಹಾಗೂ ನಂತರದ ಸಾಲಿನಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಆಧಾರ ಸಂಖ್ಯೆ ಆಧಾರಿತ ಡಿಜಿಟಲ್ (E-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು Online/digital formatನಲ್ಲಿ ತಯಾರಿಸಿ, ವಿತರಿಸಲು ಹಾಗೂ ಪ್ರತಿಗಳನ್ನು National Academic Depository (NAD) ಮಾದರಿಯಲ್ಲಿ, ಮೆ. ಕಿಯೋನಿಕ್ಸ್ ಸಂಸ್ಥೆಯವರ Electronic Document Generation System (EDGS) ತಂತ್ರಾಂಶವನ್ನು ಬಳಸಿಕೊಂಡು Karnataka State Data Center (KSDC) ಯಲ್ಲಿ ಶೇಖರಿಸಲು ಅನುಕೂಲವಾಗುವಂತೆ ಕಾರ್ಯ ಪ್ರಗತಿಯಲ್ಲಿದ್ದು, ಇದನ್ನು ಕೂಡಲೇ ಅನುಷ್ಠಾನಗೊಳಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.**

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಖಾಲಿ ಇರುವ ಅಂಕಪಟ್ಟಿಗಳು ಹಾಗೂ ಎಲ್ಲಾ ಪದವಿ ಪ್ರಮಾಣ ಪತ್ರಗಳನ್ನು ಹಿಂದಿನ ಸಾಲುಗಳಲ್ಲಿ ಪ್ರವೇಶಾತಿ ಪಡೆದು ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಅವರು ಕೋರುವ ಅಂಕಪಟ್ಟಿ ಮತ್ತು ತಿದ್ದುಪಡಿ ಅಂಕಪಟ್ಟಿ ಮತ್ತು ಎಲ್ಲಾ ಪದವಿ ಪ್ರಮಾಣ ಪತ್ರಗಳನ್ನು ನೀಡಲು ಉಪಯೋಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

-----

30/8/19

ಕುಲಸಚಿವರು

ಕುಲಪತಿಗಳು

30/8/19

ವಿಷಯ ಸಂಖ್ಯೆ : 13.05

**ವಿಷಯ:** ವಿಶ್ವವಿದ್ಯಾನಿಲಯದ ಪದವಿ ಹೊಂದಿದ ವಿದ್ಯಾರ್ಥಿಗಳಿಗೆ ವಿವಿಧ ಪತ್ರಗಳನ್ನು ವಿತರಿಸುವ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳನ್ನು ಪರಿಹರಿಸಲು ಸಮಿತಿ ರಚಿಸಿರುವುದನ್ನು ಪುನರ್ ಪರಿಷ್ಕರಿಸುವ ಬಗ್ಗೆ.

*****

ವಿಶ್ವವಿದ್ಯಾನಿಲಯ ಪ್ರಾರಂಭವಾದ 1996 ರಿಂದ ಇದುವರೆವಿಗೂ ವಿವಿಧ ವಿಷಯಗಳಲ್ಲಿ ಪದವಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಪ್ರಸ್ತುತ ತಾತ್ಕಾಲಿಕ ಪ್ರಮಾಣ ಪತ್ರ, ನೈಜತೆ ಪ್ರಮಾಣ ಪತ್ರ, ವಲಸೆ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರ ಹಾಗೂ ಪ್ರತಿಲಿಪಿಗಳನ್ನು ಕೋರಿ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭಗಳಲ್ಲಿ ಪರೀಕ್ಷಾ ದಾಖಲೆಗಳನ್ನು ಪರಿಶೀಲನೆ ನಡೆಸಿದಾಗ ಕೆಲವು ವ್ಯತ್ಯಾಸ /ನ್ಯೂನತೆ ಕಂಡು ಬರುತ್ತಿದ್ದು, ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಂಬಂಧವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಿ ದಿನಾಂಕ: 26.03.2019 ರಂದು ಆದೇಶ ಹೊರಡಿಸಲಾಗಿತ್ತು (ಪ್ರತಿ ಲಗತ್ತಿಸಿದೆ).

<u>ಸಮಿತಿ ಸದಸ್ಯರುಗಳ ವಿವರ:</u>

- ಡೀನ್ (ಶೈಕ್ಷಣಿಕ) – ಅಧ್ಯಕ್ಷರು
- ನಿರ್ದೇಶಕರು (ಮಾನವಿಕ ವಿಭಾಗ) – ಸದಸ್ಯರು
- ಕುಲಸಚಿವ (ಪರೀಕ್ಷಾಂಗ) – ಸದಸ್ಯ ಸಂಚಾಲಕರು

ಮುಂದುವರೆದು, ಮೇಲ್ಕಂಡ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊ. ಜಗದೀಶ್, ರವರು ನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ಸಮಿತಿಯ ಅಧ್ಯಕ್ಷ ಸ್ಥಾನವು ತೆರವಾಗಿರುತ್ತದೆ. ಸದರಿ ಸಮಿತಿಯನ್ನು ಪುನರ್ ರಚಿಸುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

ತೀರ್ಮಾನ : ವಿದ್ಯಾರ್ಥಿಗಳಿಗೆ ವಿವಿಧ ದಾಖಲೆಗಳನ್ನು ವಿತರಿಸುವ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳನ್ನು ಪರಿಹರಿಸುವ ಬಗ್ಗೆ ಈ ಹಿಂದೆ ಇದ್ದ ಸಮಿತಿಯನ್ನು ಪುನರ್ ರಚಿಸಲು ತೀರ್ಮಾನಿಸಲಾಯಿತು.

<u>ಸಮಿತಿ ಸದಸ್ಯರುಗಳ ವಿವರ:</u>

- ಪ್ರೊ. ಡಿ.ಟಿ. ಬಸವರಾಜ್, ಡೀನ್(ಶೈಕ್ಷಣಿಕ) – ಅಧ್ಯಕ್ಷರು
- ಪ್ರೊ. ಎ: ರಂಗಸ್ವಾಮಿ, ಕುಲಸಚಿವ(ಪರೀಕ್ಷಾಂಗ) – ಸದಸ್ಯರು
- ಡಾ. ಲಕ್ಷ್ಮಿ, ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ – ಸದಸ್ಯರು
- ಡಾ. ತೇಜಸ್ವಿ ನವಿಲೂರು, ವಿಶೇಷಾಧಿಕಾರಿ, ಡೀನ್(ಶೈಕ್ಷಣಿಕ) – ಸದಸ್ಯರು
- ಉಪಕುಲಸಚಿವ(ಪರೀಕ್ಷಾಂಗ) (ಇನ್‌ಹೌಸ್) – ಸದಸ್ಯರು
- ಉಪಕುಲಸಚಿವ(ಪರೀಕ್ಷಾಂಗ) (ಸಹಭಾಗಿತ್ವ ಸಂಸ್ಥೆ) – ಸಂಚಾಲಕರು

———

ವಿಷಯ ಸಂಖ್ಯೆ : 13.06

**ವಿಷಯ:** ವಿಶ್ವವಿದ್ಯಾನಿಲಯದಿಂದ ನಡೆಸಲಾದ ಸಹಭಾಗಿತ್ವ ಸಂಸ್ಥೆಗಳ ತಾಂತ್ರಿಕೇತರ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳ ಪರೀಕ್ಷಾ ದಾಖಲಾತಿ ಪರಿಶೀಲನೆಯ ಬಗ್ಗೆ.

*****

ವಿಶ್ವವಿದ್ಯಾನಿಲಯದ ಹಾಗೂ ಸಹಭಾಗಿತ್ವ ಸಂಸ್ಥೆಗಳ ವಿವಿದ ಶಿಕ್ಷಣ ಕ್ರಮಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿ ಹಾಗೂ ವಿವಿಧ ಪ್ರಮಾಣ ಪತ್ರಗಳ ಕೋರಿಕೆ ಸಂಬಂಧ ದಿನನಿತ್ಯ ಹಲವಾರು ಅರ್ಜಿಗಳು ಬರುತ್ತಿದ್ದು, ದಾಖಲಾತಿಗಳನ್ನು ಪರಿಶೀಲಿಸಲು ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳಲಾಗುತ್ತಿದ್ದು, ಪರಿಶೀಲನೆಯ ವಿಳಂಬವನ್ನು ತಪ್ಪಿಸಲು ಹಾಗೂ ನಿಗದಿತ ಸಮಯಕ್ಕೆ ವಿದ್ಯಾರ್ಥಿಗಳಿಗೆ ಸ್ಪಂದಿಸಲು ಈ ಮುಂದಿನ ದಾಖಲಾತಿ ಪರಿಶೀಲನೆಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

ಕುಲಸಚಿವರು 30/8/19 ಕುಲಪತಿಗಳು 30/8/19

1) 1996 ರಿಂದ 2005 ರವರೆಗೆ ಅಂಕಪಟ್ಟಿ ತಖ್ತೀಕರಣ (Tabulation Ledger) ಆಧಾರದ ಮೇರೆಗೆ ಪರಿಗಣಿಸಿ ಅಂತಹ ವಿದ್ಯಾರ್ಥಿಗಳ ಮನವಿಯ ಅರ್ಜಿಗಳನ್ನು ಅಂಕಪಟ್ಟಿ ತಿದ್ದುಪಡಿ, ಪ್ರತಿಲಿಪಿ, ತಾತ್ಕಾಲಿಕ ತೇರ್ಗಡೆ ಪ್ರಮಾಣಪತ್ರ, ಪದವಿ ಪ್ರಮಾಣ ಪತ್ರಗಳನ್ನು ವಿಳಂಬ ಮಾಡದೇ ವಿಲೇವಾರಿ ಮಾಡಲು ಕ್ರಮವಹಿಸುವುದರ ಬಗ್ಗೆ.

   2006 ರಿಂದ 2012 ರವರೆಗೆ ವಿಶ್ವವಿದ್ಯಾನಿಲಯದ ಸಾಂಪ್ರದಾಯಿಕ ಹಾಗೂ ತಾಂತ್ರಿಕೇತರ ಶಿಕ್ಷಣಕ್ರಮಗಳಾದ–
   **B.A, B.Com, M.A., M.Com, MBA (As per KSOU), BSc.IT, M.Sc.IT (within 2012 as per DEC approval)** ಗಳನ್ನು ವ್ಯಾಸಂಗ ಮಾಡಿದ ಕರ್ನಾಟಕ ರಾಜ್ಯದ ಒಳಗಿನ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ವಿವಿದ ಪ್ರಮಾಣಪತ್ರಗಳನ್ನು ವಿತರಿಸುವ ಸಂಬಂಧ ಪರೀಕ್ಷಾ ವಿಭಾಗದ ಪರೀಕ್ಷಾ ವಹಿ, ಎ–ಫಾರಂ, **OMR** ಗಳು ಅಂಕಪಟ್ಟಿಗೆ ಹೊಂದಾಣಿಕೆ/ತಾಳೆಯಾದಲ್ಲಿ, ಪ್ರವೇಶಾತಿಯ ಅನುಮೋದನಾ ಪಟ್ಟಿಯನ್ನು ಪರಿಗಣಿಸಿ ಅಂತಹ ವಿದ್ಯಾರ್ಥಿಗಳ ಮನವಿಯ ಅರ್ಜಿಗಳನ್ನು ಅಂಕಪಟ್ಟಿ ತಿದ್ದುಪಡಿ, ಪ್ರತಿಲಿಪಿ, ತಾತ್ಕಾಲಿಕ ತೇರ್ಗಡೆ ಪ್ರಮಾಣಪತ್ರ, ಪದವಿ ಪ್ರಮಾಣಪತ್ರಗಳನ್ನು ವಿಳಂಬ ಮಾಡದೇ ವಿಲೇವಾರಿ ಮಾಡಲು ಕ್ರಮವಹಿಸುವುದರ ಬಗ್ಗೆ.

2) 2012–13 ರಿಂದ 2015 ರವರೆಗಿನ ಮೆ. IEM ಸಂಸ್ಥೆಯವರು ವಿವಿದ ಸಂಸ್ಥೆಗಳಲ್ಲಿ ತಾಂತ್ರಿಕ ಶಿಕ್ಷಣಕ್ರಮಗಳ ಪರೀಕ್ಷಾ ರಹಸ್ಯ ಕಾರ್ಯದ ದಾಖಲೆಗಳಲ್ಲಿ ಅಂಕಗಳನ್ನು ನಮೂದಿಸಿರುವ ವಹಿಯನ್ನು ದೃಢೀಕರಿಸದೇ ಇರುವುದರಿಂದ ಯಾವ ಕ್ರಮ ಕೈಗೊಳ್ಳಬೇಕು.

   IEM ಸಂಸ್ಥೆಯವರು ಸಹಭಾಗಿತ್ವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ಡಾಟಾಗಳನ್ನು ನೀಡಿರುವುದಿಲ್ಲವೆಂಬ ಅಂಶವನ್ನು ಈ ಸಂದರ್ಭದಲ್ಲಿ ಅವಗಾಹನೆಗಾಗಿ ಮಂಡಿಸುತ್ತಾ, ಈ ಸಂಬಂಧ ಯಾವ ಕ್ರಮಕೈಗೊಳ್ಳಬೇಕೆಂಬುದರ ಬಗ್ಗೆ.

   ಸದರಿ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಮನವಿಯ ಅರ್ಜಿಗಳಲ್ಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ಕೋರಿರುವ ಸಂದರ್ಭದಲ್ಲಿ ಪ್ರವೇಶಾತಿ ಅನುಮೋದನೆಯ ಪಟ್ಟಿಯ ದೃಢೀಕರಣ ಮಾಡಿಕೊಂಡು ಪರೀಕ್ಷಾ ವಹಿ, ಎ–ಫಾರಂ, OMR ಗಳನ್ನು ಅಂಕಪಟ್ಟಿಯೊಂದಿಗೆ ತಾಳೆಯಾದ ಸಂದರ್ಭದಲ್ಲಿ ಮಾತ್ರ ಕ್ರಮವಹಿಸಬಹುದು ಎಂಬುದರ ಬಗೆಗೆ.

3) 2017ರಲ್ಲಿ ಅಂಕಪಟ್ಟಿ ಮುದ್ರಿಸುತ್ತಿದ್ದ IEM ಸಂಸ್ಥೆಯ ಮೇಲ್ವಿಚಾರಕ ಸಿಬ್ಬಂದಿ ಶ್ರೀ. ವೇಣು ಎಂಬಾತನನ್ನು Fraud ಮಾಡಿ ಅಂಕಪಟ್ಟಿ ಮುದ್ರಿಸಿ ನೀಡಿರುವ ಬಗ್ಗೆ ದಸ್ತಗಿರಿಯಾಗಿರುತ್ತಾನೆ. ಆ ಸಂದರ್ಭದಲ್ಲಿ ಪ್ರವೇಶಾತಿ ಮತ್ತು ಪರೀಕ್ಷಾ ಬರೆಯದವರಿಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಂಕಪಟ್ಟಿ ಮುದ್ರಿಸಿ ನೀಡಿರುತ್ತಾರೆ ಈ ವಿಷಯದಲ್ಲಿ ಯಾವ ಕ್ರಮ ಅನುಸರಿಸಬೇಕೆಂಬ ಬಗ್ಗೆ.

4) ಪೊಲೀಸ್ ಇಲಾಖೆಯವರು ವಶಪಡಿಸಿಕೊಂಡ ಅಂಕಪಟ್ಟಿಗಳು ವಿವಿದ ಪ್ರಮಾಣಪತ್ರಗಳ ಬಗೆಗಿನ ಪೊಲೀಸ್ ಮೊಕದ್ದಮೆಗಳ ಬಗ್ಗೆ ಯಾವ ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ.

5) ಈಗಾಗಲೇ ಪದವಿ ಪ್ರಮಾಣಪತ್ರಗಳನ್ನು ಪಡೆದಿರುವ ವಿದ್ಯಾರ್ಥಿಗಳು ನೈಜತೆ ಹಾಗೂ ಪ್ರತಿಲಿಪಿ ಕೋರಿ ಅರ್ಜಿ ಸಲ್ಲಿಸಿದಾಗ ಯಾವ ರೀತಿ ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ.

   ಪದವಿ ಪ್ರಮಾಣಪತ್ರ ಪಡೆದಂತಹ ವಿದ್ಯಾರ್ಥಿಗಳು ನೈಜತೆ ಹಾಗೂ ಪ್ರತಿಲಿಪಿ ಕೋರಿ ಅರ್ಜಿ ಸಲ್ಲಿಸಿದಾಗ, ಅಂಕಪಟ್ಟಿ ಹಾಗೂ ಪರೀಕ್ಷಾ ವಹಿ ಹಾಗೂ OMR ತಾಳೆಯಾದ ಸಂದರ್ಭದಲ್ಲಿ ವಿತರಿಸಲು ಕ್ರಮವಹಿಸುವುದರ ಬಗ್ಗೆ. ಆ ಸಂದರ್ಭದಲ್ಲಿ ಪರಿಶೀಲಿಸಿದಾಗ ಸದರಿ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿಲ್ಲದಿರುವುದು ಕಂಡು ಬರುತ್ತದೆ 151ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ಪ್ರವೇಶಾತಿ ಅನುಮೋದನಾ

30/8/19
ಕುಲಸಚಿವರು

ಕುಲಪತಿಗಳು
30/8/19

ಪಟ್ಟಿ ಮತ್ತು ಲೆಡ್ಜರ್‌ನಲ್ಲಿ ಇದ್ದವರಿಗೆ ಮಾತ್ರ ನೀಡಬೇಕೆಂದು ತೀರ್ಮಾನಿಸಲಾಗಿದೆ. ಈ ಬಗ್ಗೆ ಕಛೇರಿ ಆದೇಶ ಕೂಡ ಹೊರಡಿಸಲಾಗಿರುತ್ತದೆ ಎಂಬ ಬಗ್ಗೆ.

6) 1996 ರಿಂದ 2012 ರವರೆಗಿನ ಪ್ರವೇಶಾತಿ ದಾಖಲಾತಿಗಳು ಲಭ್ಯವಿಲ್ಲದಿರುವುದರಿಂದ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ವಿವಿದ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ಯಾವ ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ವಿಷಯವನ್ನು 13ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಗೆ ಚರ್ಚೆ ನಿರ್ಣಯಕ್ಕಾಗಿ ಮತ್ತು ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ : ವಿಷಯ ಸಂಖ್ಯೆ: 13.06ರ ನಿರ್ಣಯಗಳು:–**

1) ಈ ಬಗ್ಗೆ ಕ್ರಮವಹಿಸಲು ನಿರ್ಣಯಿಸಲಾಯಿತು.

<u>2006 ರಿಂದ 2012 ರವರೆಗೆ ವಿಶ್ವವಿದ್ಯಾನಿಲಯದ ಸಾಂಪ್ರದಾಯಿಕ ಹಾಗೂ ತಾಂತ್ರಿಕೇತರ ಶಿಕ್ಷಣಕ್ರಮಗಳಾದ–</u>

2006 ರಿಂದ 2012ರವರೆಗೆ ವಿಶ್ವವಿದ್ಯಾನಿಲಯದ ಇನ್‌ಹೌಸ್ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ ವಿಷಯದಲ್ಲಿ ನಮೂದಾಗಿರುವ ಕೋರ್ಸುಗಳಿಗೆ 2012ರ ವರೆಗೆ DEC ಯಿಂದ ಅನುಮೋದನೆ–ಗೊಂಡಿರುವ ಕೋರ್ಸಿನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಅಂಕಪಟ್ಟಿ ತಿದ್ದುಪಡಿ, ಪ್ರತಿಲಿಪಿ, ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

2) ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು 'ತಾಂತ್ರಿಕ ತಜ್ಞರ ಸಮಿತಿ' ಯನ್ನು ರಚಿಸಿ ಅವರಿಂದ ಪರೀಕ್ಷಾ ರಹಸ್ಯ ಕಾರ್ಯದ ದಾಖಲೆಗಳಲ್ಲಿ ಅಂಕಗಳನ್ನು ನಮೂದಿಸಿರುವ ವಹಿಯನ್ನು ದೃಢೀಕರಿಸಿಕೊಂಡು ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

3) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಕ್ರಮವಹಿಸಲು ಶಿಫಾರಸ್ಸು ಮಾಡಲಾಯಿತು.

4) ವಶಪಡಿಸಿಕೊಂಡಿರುವ ಅಂಕಪಟ್ಟಿಗಳ ಮತ್ತು ಇವರ ಪ್ರಮಾಣ ಪತ್ರಗಳ ಜೆರಾಕ್ಸ್ ಅನ್ನು ಪೋಲೀಸ್ ಇಲಾಖೆಯಿಂದ ಪಡೆದುಕೊಳ್ಳಬೇಕೆಂದು ಅದನ್ನು ದೃಢೀಕರಿಸಿಕೊಂಡು ಮುಂದಿನ ಪ್ರಕ್ರಿಯೆಗೊಳಿಸುವುದು.

5) ದಾಖಲೆಗಳನ್ನು ಪರಿಶೀಲಿಸಿ ವಿದ್ಯಾರ್ಥಿ ಕೋರಿಕೆಯನ್ನು ಪರಿಗಣಿಸಲು ಶಿಫಾರಸ್ಸು ಮಾಡಲಾಯಿತು.

30/8/19

ಕುಲಸಚಿವರು

ಕುಲಪತಿಗಳು

30/8/19

6) 2012ರವರೆಗೆ DEC ಯಿಂದ ಅನುಮೋದನೆಗೊಂಡಿರುವ ಕೋರ್ಸ್‌ನ ಸಹಭಾಗಿತ್ವ ಸಂಸ್ಥೆಯ **B.Tech / M.Tech., MBA, MCA Diploma** ಒಳಗೊಂಡು ಇನ್ನಿತರೆ ಎಲ್ಲಾ ತಾಂತ್ರಿಕ ಕೋರ್ಸುಗಳನ್ನು ಹೊರತುಪಡಿಸಿ ಉಳಿದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತಿತರೆ ಪ್ರಮಾಣ ಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಪ್ರವೇಶಾತಿ ಅನುಮೋದನೆ, ಪರೀಕ್ಷಾ ಶುಲ್ಕ ಪಾವತಿ ಸಂಬಂಧದ ದಾಖಲೆ, ಓ.ಎಂ.ಆರ್/ಎ-ಫಾರಂಗಳನ್ನು ಪರಿಶೀಲಿಸಿ ಸಮರ್ಪಕವಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತಿತರೆ ಪ್ರಮಾಣ ಪತ್ರಗಳನ್ನು ವಿತರಿಸಲು ತೀರ್ಮಾನಿಸಲಾಯಿತು.

-----

ವಿಷಯ ಸಂಖ್ಯೆ : 13.07

**Sub:** Regarding the order dated: 06.08.2019 passed in Writ Petition No.32729-32766/2019.

**Ref:**

1) Government order No. ED UOV 2017 (Part-1), Dated:05.03.2018
2) Corrigendum Order to Sl. No 1 above No. ED UOV 2017 (Part-1) Dated: 05.03.2018
3) Interim order passed in Writ Petition in Nos WP No.14903-912 0f 2019, WP.No.29605-625 of 2019, WP.No.30808-812/2019, WP.No.30907-909/2019, WP.No.30121 of 2019, WP.No.30278-290 of 2019 and WP.No.31121-124 of 2019.
4) Order dated:06.08.2019 passed in Writ Petition in Nos. 32729-766 of 2019, WP.Nos.32767-786 of 2019, WP.Nos.32792-817 of 2019, WP.Nos.33066-070 of 2019, WP.No.35230 of 2019, WP.Nos.36727-742 of 2019 and WP.Nos..36743-758 of 2019.
5) The Proceedings of the 44th Academic Council Meeting held on 22.03.2018
6) The Proceedings of the 150th Board of Management Meeting held on 24.03.2018.
7) Letter from the University in No. KSOU/VCPS/04/2018-19, dated: 21.04.2018 to the Hon'ble Governor and the Chancellor of the University requesting to permitting H.E to implement the G.O dated: 05.03.2018, under Sl.No.1 above.
8) Letter from the University in No. KSOU/VCPS/80/2018-19, dated: 26.12.2018 to the Principal Secretary, Higher Education Department, Govt. of Karnataka, Bengaluru.
9) Letter from the Government No. ED 54 UOV 2017 (Part-4), Dated: 27.02.2019

30/8/19
ಕುಲಸಚಿವರು

ಕುಲಪತಿಗಳು
30/8/19

10) Reply of the University in No. KSOU/VCPS/ 03/2019-20, dated: 27.04.2019 to the ACS to Government, Education Department (Higher Education), Bengaluru under Sl.No.8.

11) The Proceedings of the 11th Special Academic Council Meeting held on 13.07.2019.

*****

This University is the State Open University in State of Karnataka established on 01.06.1996 under an Act of State Legislature The Karnataka State Open Act 1992 (Act No 46 of 1994). The University was established under Article 246 of the Constitution of India by the State Legislature. As such, the University stands automatically recognized under Section 2(f) of the UGC Act, 1956. The Universities under law in India are vested with the powers to award degrees in accordance with the specification of degrees under Section 22 (3) of UGC Act, 1956.

The University is vested with the powers to hold the Examination and confer the Degrees and Diploma Certificates vide Section 5 (iii) of the KSOU Act-1992. Academic Council is the Principal Academic body of the University and shall have the powers for determination and maintenance of standards under Section 19 (2) of the Act. The Academic Council shall also vest with the power to take policies on academic issues and shall have a general supervision over the method of instruction, evaluation, research and improvement of standards under Section 10 of the Second Schedule of the Act.

That previously the University was recognized by the then Distance Education Council, New Delhi, constituted by the MHRD till April 2013, as per the orders of the Distance Education Council dated:08.04.2008. Later on the regulatory powers regarding the Open Distance Mode in the nation was vested with the University Grants Commission, New Delhi from May 2013.

The University Grants Commission, New Delhi has issued Public Notice dated: 16.06.2015 declaring that the Courses of this University has not recognized beyond 2012-13.

The University Grants Commission while issuing the Public Notice dated:16.06.2015 only objected the technical and professional courses offered by the erstwhile private academic collaborative institutions and their study centers within and outside the territory of the State of Karnataka, justifying its action through the Show Cause Notice issued to the University by the erstwhile Distance Education Council (D.E.C), New Delhi dated:10.06.2011. By the time said Public notice dated: 16.06.2015 was issued the admissions for the In-house academic programmes of this University for the years 2013-14 and 2014-15 were completed as per the directions of the State Government in its letter No. ED 49 UOV 2014 (Part), dated:03.12.2015.

The In-house non-technical courses imparted by the University during 2013-14 and 2014-15 were in par with the D.E.C and U.G.C norms and they were imparted directly by the University within the State of Karnataka.

The U.G.C, New Delhi while issuing the Public notice dated: 16.06.2015 retrospectively declaring that the Courses of this University has not recognized beyond 2012-13. However the U.G.C, New Delhi has not commented anything regarding the In-house academic programmes of this University which are offered directly by this University within the territory of the State of Karnataka.

**Regarding the In-House Non-Technical Courses of the University it is pertinent to note the following;**

a) The University has not violated any provisions of the UGC Act in so far as In-House Non-Technical Courses are concerned.

ಕುಲಸಚಿವರು 30/8/19

ಕುಲಪತಿಗಳು 30/8/19

b) The UGC Expert Committee has not pointed-out any irregularity in the In-House system of the University.
c) Erstwhile D.E.C notice is restricted only to the Para-Medical, Technical and the Professional Courses. It is needless to say there is no controversies as to the In-House Non-Technical Courses are concerned.
d) UGC Public Notice dated:16.06.2015 cannot take away the vested rights of the students who have successfully completed or pursued the courses.
e) The University vested with the powers to confer degrees so long as University satisfies the requirement of Section 2(f) and 22(3) of UGC Act 1956.
f) The UGC Expert Committee visited on 12th of December 2015 did not make any adverse remarks of observations as to the functioning of the In-House system of offering Distance Education Programme. This point has been brought to the notice of the UGC in the earlier proposal submitted by the University.

Therefore the In-house academic programmes of this University are even otherwise are in par with the U.G.C norms and recognized.

The State Government and the University is often and again requesting the UGC to accord recognition to the In-House Non-Technical Programmes of the University for the year 2013-14 and 2014-15 as a One Time Measure.

In the meanwhile keeping in view the interest of the students admitted during the academic years 2013-14 and 2014-15 to the In-House Non-Technical Programmes of the University. The Government of Karnataka acting upon the report of the High Level Expert Committee headed by the then Additional Chief Secretary to the Government; has issued Orders in G.O No. ED 54 UOV 2017 (Part-I) dated: 05.03.2017. The said G.O honoured the degrees of the Students of this University in respect of the In-house Non-Technical Academic Programmes admitted during the years 2013-14 and 2014-15 for prosecution of higher studies, recruitment/promotions.

The Academic Council at its 44th meeting held on 22.03.2018 has resolved to visa-vis implement the Government Order dated: 05.03.2018 under reference Sl.No.1 above. The Board of Management which is an apex body of the University in its 150th General Meeting held on 24.03.2018 approved the above decision of the Academic Council.

The University through its requisition under reference Sl.No.7 above has approached the Hon'ble Governor of Karnataka and the Chancellor of the University seeking his permission to issue Marks Cards and to conduct Examinations to the remaining students in respect of the students who have enrolled In-House Non-Technical Programmes within Karnataka during the Academic years 2013-14 and 2014-15 quoting the Government order, under reference Sl.No.1 above.

The State Government in its letter under reference Sl. No.9 above has sought clarification "... There were communication between the KSOU and the UGC wherein it was noticed that UGC in its letter dated:11.12.2017 is categorically decided that Ex-post facto approval cannot be granted to any of the courses including the In-House courses but in the G.O dated:05.03.2018, the State Government has ordered to consider Non-Technical In-House courses approved by the UGC for the period 2013-14 and 2014-15 for further studies/appointments and promotions. In this regard, it would be contradictory to request the Hon'ble Governor and the Chancellor to consider the same...". The University vide under reference Sl.No.10 above, has categorically clarified the State Government that, "....Since the University had admitted the students for the In-House Non-Technical courses for the period of 2013-14 and 2014-15 prior to the derecognition by the UGC vide public notice

ಕುಲಸಚಿವರು 30/8/19

ಕುಲಪತಿಗಳು 30/8/19

dated:16.06.2015 and the UGC Expert Committee has not made any observations about these programmes it is justifiable to grant approval for the above period as one time measure at larger interest of the student community….".

Recently, more than 170 Students/Degree Holders enrolled of the In-House Non-Technical Academic Programmes for the years 2013-14 and 2014-15 have filed Writ Petitions before the Hon'ble High Court of Karnataka, Bengaluru. Wherein the Petitioners sought relief under the background of the G.O dated: 05.03.2018, against the University completing their course, examinations, announcement of results, issuance of the Marks Cards, Degree Certificates. Further a specific relief against the UGC to recognize the UG/PG Degrees obtained from this University as In-House Non-Technical Academic Programmes for the years 2013-14 and 2014-15.

These Writ Petitioners comprised of majorly candidates who were shortlisted for appointments under Governmental agencies. Some of them are qualified for Departmental Promotions and Career Advancement under seniority cum merit. in the Writ Petition previously filed, the Hon'ble High Court has been pleased to issue Interim Orders, directing the University to issue Marks Cards/Degree Certificates relating to the courses cleared by the petitioners. Considering the exigency of the said petitioners/students and acting upon the orders of Hon'ble High Court the University issued Marks cards and Provisional Pass Certificates to the Petitioners/Students.

In the Writ Petitions filed subsequently, i.e., WP. No.32729-32766, the Hon'ble High Court has been pleased to pass Orders dated: 06.08.2019 (Under Reference Sl. No. 04 above) in the terms of the interim orders passed in the previous Writ Petitions. Further, in the said order the Hon'ble High Court has also been pleased to direct the University (Respondent No.1) the following;

> **"…Respondent No.1 is hereby directed to pass speaking order and produce the same before this court, whether petitioners are entitled for the relief in the present petitions or not on or before the next date of hearing…".**

**Copy of this order shall be handed over to the learned AGA appearing for the respondent No.3-State...". (Copy enclosed).**

The above case is posted to 03.09.2019 along with the connected Writ Petitions for hearing.

In light of the above detailed adherence of the UGC norms in respect of the In-House Non-Technical Academic Programmes imparted during 2013-14 and 2014-15 coupled with the directions of the Hon'ble High Court dated: 06.08.2019 under reference Sl.No.4 above, the University shall have to pass a speaking order and produce the same before the Hon'ble Court as to whether the Petitioners are entitled to reliefs sought in the said Writ Petitions are not before the next date of hearing. .

The above facts and circumstances along with the Hon'ble High Court orders are placed before the Academic Council meeting with relevant documents for its deliberation and decision.

The Academic Council perused the subject in detail and also the references listed therein coupled with the Government orders dated:05.03.2018 and the Court orders dated:06.08.2019 in the batch of Writ Petitions; referred in the subject.

It is undisputed that either the erstwhile Distance Education Council, New Delhi or the UGC, New Delhi have not objected the In-House Non-Technical Academic Programmes imparted directly by the University within the State of Karnataka.

ಕುಲಸಚಿವರು 20/8/19

ಕುಲಪತಿಗಳು 20/8/19

It is also undisputed that the UGC Expert Committee that visited the University during the month of December 2015 has not made any adverse remarks in respect of the In-House Non-Technical Academic Programmes.

The State Government by virtue of its order dated:05.03.2018 has recognized the Degrees of Graduation and Post Graduation of the candidates in respect of the In-House Non-Technical Academic Programmes admitted during 2013-14 and 2014-15, for Recruitments/Promotions and also for pursuing Higher Education.

The Academic Council in its 44th General meeting held on 22.03.2018 has resolved to vis-a-vis implement the Government Order dated:05.03.2018. The Board of Management which is an apex body of the University in its 150th General Meeting held on 24.03.2018 approved the decision of the Academic Council dated:22.03.2018. The University has approached the Hon'ble Governor of Karnataka and the Chancellor of the University seeking his permission to issue Marks Cards and to conduct Examinations to the remaining students in respect of the students who have enrolled In-House Non-Technical Programmes within Karnataka during the Academic years 2013-14 and 2014-15 as per the Government order dated :05.03.2018.

However, the said decision of the Board of Management's 150th General Meeting was confirmed in the Board of Management's 151st General Meeting.

The orders of the Hon'ble High Court of Karnataka, Bengaluru has passed orders on 06.08.2019 in Writ Petition No.32729-32766 of 2019 wherein, the University has been directed to pass a Speaking Order and to produce the same to the said Court, as to whether the petitioners are entitled for the relief sought in the said Writ Petition. In the Writ Petitions referred in the subject, directions has been sought against the University for completion of the In-House Non-Technical Under Graduate/Post Graduate Programmes of the students admitted during the years 2013-14 and 2014-15, to issue Marks Cards and Degree Certificates in respect of the candidates who have already completed the course.

In the said Writ Petitions relief is also sought to direct the UGC (2nd Respondent) to recognize the Degrees of the candidates admitted in the University to In-House Non-Technical Programmes during the years 2013-14 and 2014-15.

Having deliberated the above facts and circumstances and in the light of the same it is recommended as under;

**DECISION:**

a) To implement the decision of the Academic Council in its 44th General meeting held on 22.03.2018 which has been approved by the Board of Management's 150th General Meeting and confirmed in the Board of Management's 151st General Meeting; in respect of Government Order No. ED UOV 2017 (Part-1), Dated: 05.03.2018 till the extent of issuance of Provisional Pass Certificate (PPC) to the eligible candidates.

b) To seek approval of Hon'ble Chancellor of the University to issue Degree Certificates to the eligible candidates in respect of the students who have been admitted to the In-House Non-Technical Programmes of the University within Karnataka during the Academic years 2013-14

ಕುಲಸಚಿವರು 30/8/19

ಕುಲಪತಿಗಳು 30/8/19

and 2014-15, by extending relief of the Government order Government order No. ED UOV 2017 (Part-1), Dated: 05.03.2018; as the In-House Non-Technical Programmes of the University imparted within Karnataka are even otherwise in par with the DEC/UGC norms and never been objected by them at any point of time.

c) Pass Speaking Orders in light of the decisions at (a) above and submit the same before the Hon'ble High Court of Karnataka at Bengaluru.

-----

ವಿಷಯ ಸಂಖ್ಯೆ : 13.08

ವಿಷಯ: ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರೆ ವಿಷಯಗಳು

*****

2019–20 ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾನಿಲಯದಲ್ಲಿ ನಡೆಸುವ 2ನೇ / 3ನೇ ವರ್ಷದ ಬಿ.ಎ/ಬಿ.ಕಾಂ., ಮತ್ತು 2ನೇ ವರ್ಷದ ಎಂ.ಎ/ಎಂ.ಕಾಂ., ಕೋರ್ಸುಗಳಿಗೆ ಇನ್ನಿತರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನೇರ ಪ್ರವೇಶಾತಿಯನ್ನು ಪಡೆಯುವ ಬಗ್ಗೆ.

ಅಂಚೆ ಮತ್ತು ತರೆಪಿನ ಶಿಕ್ಷಣ ಸಂಸ್ಥೆ ಕಾಲದಿಂದಲೂ ಸದರಿ ವಿಷಯವು ಚಾಲ್ತಿಯಲ್ಲಿದ್ದು, ಅದನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರಾರಂಭದಿಂದಲೂ ಅನೂಚಾನವಾಗಿ ಅಳವಡಿಸಿಕೊಂಡಿದೆ. (Deemed to have been continued)

ಸದರಿ ಅಭ್ಯಾಸವು 2014–15ನೇ ಶೈಕ್ಷಣಿಕ ಸಾಲಿನಲ್ಲಿಯೂ ಮುಂದುವರೆದು ಈ ಪದ್ಧತಿಯ ಅಡಿಯಲ್ಲಿ ವಿದ್ಯಾರ್ಥಿಗಳು ಕರಾಮುವಿ ನಿಗದಿಪಡಿಸಿದ ನಿಬಂಧನೆಗಳನ್ನು ಪಾಲಿಸಿ ಪ್ರವೇಶಾತಿ ಪಡೆದಿದ್ದರು. ಕರಾಮುವಿ ಕಾಯ್ದೆ - 1992ರ ಪ್ರಕಾರ ವಿಶ್ವವಿದ್ಯಾನಿಲಯದ ಕೋರ್ಸುಗಳಿಗೆ ಮೊದಲನೇ ಆಧ್ಯಾದೇಶವನ್ನು ಮಾನ್ಯ ಕುಲಾಧಿಪತಿಗಳಿಂದ ಅಂಕಿತ ಪಡೆದು – ತದನಂತರ ತಿದ್ದುಪಡಿಗಳೇನಾದರೂ ಮಾಡುವ ಅಗತ್ಯವಿದ್ದಲ್ಲಿ ಅಂತಹ ಆಧ್ಯಾದೇಶಗಳನ್ನು ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆ ಪಡೆದು ತಿದ್ದುಪಡಿಗಳನ್ನು ಮಾಡಬಹುದು. ಈ ನಿಯಮದಂತೆ ವಿಶ್ವವಿದ್ಯಾನಿಲಯದಲ್ಲಿ ನಡೆಸುವ 2ನೇ / 3ನೇ ವರ್ಷದ ಸ್ನಾತಕ ಮತ್ತು 2ನೇ ವರ್ಷದ ಸ್ನಾತಕೋತ್ತರ ಕೋರ್ಸುಗಳಿಗೆ ಇನ್ನಿತರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನೇರ ಪ್ರವೇಶಾತಿಯನ್ನು ಪಡೆಯುವ ಬಗೆಗೆ ಪ್ರವೇಶಾತಿ ನಿಯಮಾವಳಿಗಳಲ್ಲಿ ಸೇರಿಸಿ ಸಂಬಂಧಪಟ್ಟ ಆಧ್ಯಾದೇಶಗಳನ್ನು ತಿದ್ದುಪಡಿ ಮಾಡುವುದರ ಮುಖಾಂತರ ಅಂತಹ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಲು ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರ ಸಭೆಗಳ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಲಾಗಿದೆ.

ತೀರ್ಮಾನ : ಇತರೆ ವಿಶ್ವವಿದ್ಯಾನಿಲಯಗಳಿಂದ ಬಂದಂತಹ ವಿದ್ಯಾರ್ಥಿಗಳು ಬಿ.ಎ/ಬಿ.ಕಾಂ., ಕೋರ್ಸ್‌ನ ಮೊದಲನೇ / ಎರಡನೇ ವರ್ಷದಲ್ಲಿ ಕರಾಮುವಿಯಲ್ಲಿ ನಿಗದಿಪಡಿಸಿದ ಕೋರ್ಸುಗಳನ್ನು ಹಿಂದಿನ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡದಿದ್ದಲ್ಲಿ ಅಂತಹ ಕೋರ್ಸುಗಳನ್ನು ಕರಾಮುವಿಯಲ್ಲಿ ವ್ಯಾಸಂಗ ಮಾಡುವುದು ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯ ಎಂದು ಶಿಫಾರಸ್ಸು ಮಾಡಲಾಯಿತು. ಹಾಗೆಯೇ ಇತರೆ ವಿಶ್ವವಿದ್ಯಾನಿಲಯಗಳಿಂದ ಬಂದಂತಹ ವಿದ್ಯಾರ್ಥಿಗಳು ಎಂ.ಎ/ಎಂ.ಕಾಂ., ಕೋರ್ಸ್‌ನ ಮೊದಲನೇ ವರ್ಷದಲ್ಲಿ ಕರಾಮುವಿಯಲ್ಲಿ ನಿಗದಿಪಡಿಸಿದ ಕೋರ್ಸುಗಳನ್ನು ಹಿಂದಿನ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡದಿದ್ದಲ್ಲಿ ಅಂತಹ ಕೋರ್ಸುಗಳನ್ನು ಕರಾಮುವಿಯಲ್ಲಿ ವ್ಯಾಸಂಗ ಮಾಡುವುದು ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯ ಎಂದು ಶಿಫಾರಸ್ಸು ಮಾಡಲಾಯಿತು.

-----

ಕುಲಸಚಿವರು 30/8/19

ಕುಲಪತಿಗಳು 30/8/19

ಅಂತಿಮವಾಗಿ 13ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

30/8/19

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು
30/8/19

30/8/19

ಕುಲಸಚಿವರು

ಕುಲಪತಿಗಳು
3/8/19